ಶ್ರೀ ಕೆ. ಮಲ್ಲಪ್ಪ.—588 ಅರ್ಜಿಗಳು ಬಂದಿದ್ದು ಅದರಲ್ಲಿ 39 ಅರ್ಜಿದಾರರಿಗೆ ಮಾತ್ರ ಮಾಸಾಸನ ಮಂಜೂರು ಮಾಡಲಾಗಿದೆಯೆಂದು ಹೇಳಿದ್ದೀರಿ, ಆದುದರಿಂದ ಕ್ರೀಡೆಗಳಲ್ಲಿ ಎಷ್ಟು ವಿಧವಿದೆ ? ಕಿರಿಯ ಕ್ರೀಡಾ ಪಟುಗಳ ಬೆಳವಣಿಗೆಯ ದೃಷ್ಟಿಯಿಂದ ಅವರಿಗೂ ಮಾಸಾಸನ ಕೊಡುವ ಅವಶ್ಯಕತೆ ಇಲ್ಲವೇ ?

ಶ್ರೀ ಜೀವರಾಜ್ ಆಳ್ವ.—ಕ್ರೀಡೆಗಳಲ್ಲಿ ಬಹಳ ವಿಧವಿದೆ

ಒಬ್ಬ ಮಾನ್ಯ ಸದಸ್ಯರು.—ಜಲ ಕ್ರೀಡೆ

ಶ್ರೀ ಕೆ. ಮಲ್ಲಪ್ಪ.—ಕೇವಲ 39 ಅರ್ಜಿದಾರರಿಗೆ ಮಾತ್ರ ಮಾಸಾಸನ ಕೊಟ್ಟಿದ್ದೀರಿ ಮಿಕ್ಕವರಿಗೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿರಾ ?

ಶ್ರೀ ಜೀವರಾಜ್ ಆಳ್ವ.—ಈ ಸುಮಾರು 144 ಜನರಿಗೆ ಮಾಸಾಸನ ಕೊಡುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆ, ಇದರಿಂದ ಅದಷ್ಟು ಜನಕ್ಕೆ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ :—

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರದ ಪ್ರಶ್ನೆ ಪತ್ರಿಕೆಗಳನ್ನು ಸಭೆಯ ಮುಂದಿಡುವುದು.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಕೊಡಲಾದ ಲಿಖಿತ ಉತ್ತರಗಳು :—

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

ವಿಷಯ :— ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರುವ ಕೈದಿಗಳ ಸಂಖ್ಯೆ

ಪ್ರ. 57 (72) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು ;

ಆ. ಯಾವ ಅಪರಾಧಗಳಿಗಾಗಿ ಈ ಬಂಧನದ ಶಿಕ್ಷೆ ಅನುಭವಿಸುತ್ತಿದ್ದಾರೆ ;

ಇ. ಒಂದಕ್ಕಿಂತ ಹೆಚ್ಚು ಬಾರಿ ಬಂಧನದ ಶಿಕ್ಷೆಗೆ ಒಳಗಾಗಿರುವವರ ಸಂಖ್ಯೆ ಎಷ್ಟು ;

ಈ. ಬಂಧಿತರ ಬಿಡುಗಡೆಯಾದ ಮೇಲೆ ಅವರ ಪುನರ್ ವ್ಯವಸ್ಥೆಗಾಗಿ ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ಮತ್ತು ಇವರಿಗೆ ಬಿಡುಗಡೆಯ ನಂತರ ಸಾಲ ಸೌಲಭ್ಯಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಲಾಗಿದೆಯೆ ?

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ,—(ಗೃಹ ಇಲಾಖೆಯ ರಾಜ್ಯ ಸಚಿವರು) :—

ಅ. 348

ಆ.

1.	ಭಾರತೀಯ ದಂಡ ಸಂಹಿತೆಯ 302ನೇ ವಿಧಿಯ ಅನ್ವಯ	200
2.	ಭಾರತೀಯ ದಂಡ ಸಂಹಿತೆಯ 379 ವಿಧಿ ಅನ್ವಯ	31
3.	ಭಾರತೀಯ ದಂಡ ಸಂಹಿತೆಯ 397 ವಿಧಿ ಅನ್ವಯ	4
4.	ಭಾರತೀಯ ದಂಡ ಸಂಹಿತೆಯ 420 ವಿಧಿ ಅನ್ವಯ	5
5.	ಇತರೆಯವರು	108
	ಒಟ್ಟು	348

ಇ. ಇಲ್ಲ.

ಈ. ಬಿಡುಗಡೆಯಾದ ಖೈದಿಗಳ ಪುನರ್ ವ್ಯವಸ್ಥೆಗಾಗಿ ಬಡಗಿ, ಕಮ್ಮಾರ, ನೇಯುಗೆ ಮತ್ತು ಚರ್ಮದ ಕೆಲಸಗಳನ್ನು ಮಾಡಿಕೊಳ್ಳಲು ಹಣ ಸಹಾಯವನ್ನು ಬೆಂಗಳೂರು ಕೇಂದ್ರ ಕಾರಗೃಹಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ನಿಯಮಿಸಿರುವ ಸಂಪರ್ಕಾಧಿಕಾರಿಗಳು ಒದಗಿಸುತ್ತಾರೆ, ಅಲ್ಲದೆ ಬಿಡುಗಡೆ ಹೊಂದಿಹ ಖೈದಿಗಳ ಸಹಾಯ ಸಂಘವು ಈ ರೀತಿ ಬಿಡುಗಡೆಯಾದವರ ಪುನರ್ ವಸತಿಗೆ ಸಹಾಯವು ಮಾಡುತ್ತದೆ.

ವಿಷಯ :— ರಾಜ್ಯದಲ್ಲಿ ವಿಚಾರಣೆಗೆ ಒಳಪಟ್ಟ ಕೈದಿಗಳು

ಪ್ರ. 58 (73) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ರಾಜ್ಯದಲ್ಲಿ ವಿಚಾರಣೆಗೆ ಒಳಪಟ್ಟ (ಅಂಡರ್ ಟ್ರಿಯಲ್) ಕೈದಿಗಳ ಸಂಖ್ಯೆ ಎಷ್ಟು ;

ಆ. ಈ ಕೈದಿಗಳಲ್ಲಿ ಒಂದು ವರ್ಷಕ್ಕೆ ಮೀರಿದ ಅವಧಿ 2 ವರ್ಷಕ್ಕೆ ಮೀರಿದ ಅವಧಿ ಮತ್ತು 5 ವರ್ಷಕ್ಕೆ ಮೇಲ್ಪಟ್ಟು ಇನ್ನು ವಿಚಾರಣೆಯಲ್ಲಿಯೇ ಇದ್ದು ಬಂಧಿಖಾನೆಯಲ್ಲಿ ನರಳುತ್ತಿರುವ ಖೈದಿಗಳ ಸಂಖ್ಯೆ ಎಷ್ಟು ;

ಇ. ಹೀಗೆ ಶಿಕ್ಷೆಗೊಳಗಾಗುವ ಮೊದಲೇ ಸೆರೆಮನೆಗಳಲ್ಲಿ ನರಳುವ ಖೈದಿಗಳ ಸಮಸ್ಯೆಯನ್ನು ಬಗೆಹರಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ.—(ಗೃಹ ಖಾತೆಯ ರಾಜ್ಯ ಸಚಿವರು) :—

ಅ. 2897

ಆ.

1.	1 ವರ್ಷಕ್ಕೆ ಮಿಾರಿದ	132
2.	2 ವರ್ಷಕ್ಕೆ ಮಿಾರಿದ	22
3.	3 ವರ್ಷಕ್ಕೆ ಮಿಾರಿದ	7
4.	5 ವರ್ಷಕ್ಕೆ ಮೇಲ್ಪಟ್ಟವರು	ಇಲ್ಲ
	ಒಟ್ಟು	161

ಇ. ಉಚ್ಚನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ, ರಾಜ್ಯಮಟದ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಮೂರು ತಿಂಗಳಿಗೊಮ್ಮೆ ಸೇರಿ ಮೇಲೆ ಹೇಳಿದ ಕೈದಿಗಳ ವಿಚಾರವನ್ನು ಬೇಗ ಇತ್ಯರ್ಥ ಮಾಡುವ ವಿಷಯವನ್ನು ಪರಿಶೀಲಿಸುತ್ತದೆ.

ವಿಷಯ :– ರಾಜ್ಯದಲ್ಲಿರುವ ಐ.ಪಿ.ಎಸ್ ಅಧಿಕಾರಿಗಳು

ಪ್ರ. 59 (74) ಶ್ರಿ ಪಿ. ರಾಮಚಂದ್ರರಾವ್ (ಉಲ್ಲಾಳ).––ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ನಮ್ಮ ರಾಜ್ಯದಲ್ಲಿ ಎಷ್ಟು ಐ. ಪಿ. ಎಸ್. ಅಧಿಕಾರಿಗಳಿದ್ದಾರೆ ಹಾಗೂ ಅವರಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿ ಎಷ್ಟು ಮಂದಿ ಇದ್ದಾರೆ ;

ಆ. ಇವರಲ್ಲಿ ಪೋಲೀಸೇತರ ಅಧಿಕಾರದಲ್ಲಿ ಇರುವ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು? ಇವರು ಯಾವ ಯಾವ ಹುದ್ದೆಗಳಲ್ಲಿ ಇದ್ದಾರೆ ?

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ.––(ಗೃಹ ಖಾತೆಯ ರಾಜ್ಯ ಸಚಿವರು) :—

ಅ. ಒಟ್ಟು ಐ.ಪಿ.ಎಸ್. ಅಧಿಕಾರಿಗಳು : 100
ರಾಜ್ಯ ಸರ್ಕಾರದ ಅಧೀನದಲ್ಲಿ : 82

ಆ. : 8

1. ಸರ್ಕಾರದ ಅಪರ ಕಾರ್ಯದರ್ಶಿಯವರು, ಒಳಾಡಳಿತ ಇಲಾಖೆ, ವಿಧಾನ ಸೌಧ ಬೆಂಗಳೂರು,
2. ಅಗ್ರಾಸ್ತನಾಧಿಪತಿ (ಜೀರಮನ್), ಕರ್ನಾಟಕ ವಿದ್ಯುತ್ ಕಾರ್ಖಾನೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
4. ಮುಖ್ಯ ಸಂರಕ್ಷಣ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು.
5. ನಿರ್ದೇಶಕರು, ಯುವಜನ ಸೇವೆಗಳು, ಬೆಂಗಳೂರು.
6. ಕುಲಸಚಿವರು.

ರಾಜ್ಯದಲ್ಲಿ ಪ್ರತಿ ಜಿಲ್ಲೆಗೂ ಜೂನ್ ತಿಂಗಳಿಂದ ಜನವರಿ ತಿಂಗಳು 1983ರ ವರೆಗೆ ಒದಗಿಸಲಾದ ಆಹಾರ ಪದಾರ್ಥಗಳ ಬಗೆ

ಪ್ರ. 61 (22) ಶ್ರೀ ಬೈರಪ್ಪಾಜಿ.––ಮಾನ್ಯ ಆಹಾರ ಮತ್ತು ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ರಾಜ್ಯದ ಪ್ರತಿ ಜಿಲ್ಲೆಗೂ 1983ನೇ ಜನವರಿ ತಿಂಗಳಿನಿಂದ 1983ನೇ ಜೂನ್ ತಿಂಗಳವರೆಗೆ ಪ್ರತಿ ತಿಂಗಳೂ ಒದಗಿಸಲಾದ ರಾಗಿ, ಗೋಧಿ, ಸಕ್ಕರೆ, ಹಾಗೂ ಇತರೆ ಆಹಾರ ಪದಾರ್ಥಗಳ ಪ್ರಮಾಣವೆಷ್ಟು ;

ಆ. ಹಾಲಿ ಒದಗಿಸುತ್ತಿರುವ ಆಹಾರ ಪದಾರ್ಥಗಳ ಬೆಲೆಗಳು ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ. ಹಾಗಿದ್ದಲ್ಲಿ ಹೆಚ್ಚು ಆಹಾರ ಪದಾರ್ಥಗಳನ್ನು ಒದಗಿಸಿ ಬೆಲೆಗಳು ಏರದಂತೆ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ. ಇದರೊಂದಿಗೆ ಲಗತ್ತಿಸಿರುವ ಪಟ್ಟಿಯಲ್ಲಿ ಉಕ್ತವಾಗಿದೆ.

ಶ್ರೀ ಬಸವಣಪ್ಪ.––(ಆಹಾರ ಮತ್ತು ಸರಬರಾಜು ಮಂತ್ರಿಗಳು) :––

ಅ. ಗೋಧಿ ಸಕ್ಕರೆ, ರವೆ, ಮತ್ತು ಮೈದಾ ಬೇಕಾದಷ್ಟು ಪ್ರಮಾಣದಲ್ಲಿ ಜಿಲ್ಲೆಗಳಿಗೆ ಒದಗಿಸಲಾಗುತ್ತಿದೆ. ಅಕ್ಕಿಯ ಬೇಡಿಕೆ ಜಿಲೆಗಳಲ್ಲಿ ಜಾಸ್ತಿಯಾಗಿದೆ. ಆದಕಾರಣ ಕಾಮಟೀಡಿತ ಜಿಲ್ಲೆಗಳಲ್ಲಿ ಆದಷ್ಟು ಜಾಸ್ತಿ ಆಹಾರ ಪದಾರ್ಥಗಳನ್ನು ಒದಗಿಲಾಗುತಿಗಳದೆ.

ಇ. ಜಿಲ್ಲೆಗಳಿಗೆ ಸಾಕಷ್ಟು ಗೊಧಿ ಪದಾರ್ಥಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಹೆಚ್ಚುವರಿ ಅಕ್ಕಿಯನ್ನು ಸಹ ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ.